ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

21ನೇ ಮಹಡಿ, ವಿ.ವಿ. ದೊಡ್ಡಗೋಪುರ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001.
ಕಛೇರಿ : 080-2286 4212
ಫ್ಯಾಕ್ಸ್ : 080-2286 5958
ವೆಬ್‌ಸೈಟ್ : www.gokdom.kar.nic.in
ಇ-ಮೇಲ್ : directorgokdom@gmail.com

ಸಂಖ್ಯೆ-: ಅಸಂನಿ/ವಿ.ವೇ/ಇಡಿಎನ್/ಸಿಆರ್-03/2020-21

ದಿನಾಂಕ:-09.09.2020

ಗೆ,
ಡೀನ್
ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ
ಶ್ರೀನಿವಾಸನಗರ, ಸುರತ್ಕಲ್
ಮಂಗಳೂರು

Supdt (Acd)

1619

ಮಾನ್ಯರೆ,

ವಿಷಯ:- 2020-21ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯವತಿಯಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡುವ ಮೆಟ್ರಿಕ್-ನಂತರ ವಿದ್ಯಾರ್ಥಿವೇತನ ಯೋಜನೆಯ ಅನುಷ್ಠಾನದ-ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯವತಿಯಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡುವ ಮೆಟ್ರಿಕ್-ನಂತರ ಹಾಗೂ ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನ ಯೋಜನೆಯನ್ನು ಅನುಷ್ಠಾನಗೊಳಿಸಲು ತಮ್ಮ ವಿಶ್ವವಿದ್ಯಾಲಯದ ಅಧೀನದ ಕಾಲೇಜುಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನೀಡುತ್ತಿರುವ ಸಹಾಯ ಮತ್ತು ಸಹಕಾರಕ್ಕೆ ಅಲ್ಪಸಂಖ್ಯಾತರ ಇಲಾಖೆಯು ಅಭಿನಂದನೆ ಸಲ್ಲಿಸುತ್ತಿದೆ.

ನಿಮ್ಮ ವಿಶ್ವವಿದ್ಯಾಲಯದ ಸಹಕಾರದಿಂದ ಹೆಚ್ಚಿನ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು ಮತ್ತು ಜಾರಿಗೊಳಿಸಲು ಸಹಾಯವಾಗಿರುತ್ತದೆ.ಇದರಿಂದಾಗಿ ಕರ್ನಾಟಕ ರಾಜ್ಯವು ಭಾರತ ದೇಶದ ವಿದ್ಯಾರ್ಥಿವೇತನ ಯೋಜನೆ ಅನುಷ್ಠಾನ ಕಾರ್ಯದಲ್ಲಿ ಮುಂಚೂಣಿಯಲ್ಲಿರುತ್ತದೆ.ಈ ದಿಶೆಯಲ್ಲಿ ತಮ್ಮ ವಿಶ್ವವಿದ್ಯಾನಿಲಯಕ್ಕೆ ಅಲ್ಪಸಂಖ್ಯಾತರ ಇಲಾಖೆಯು ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

2020-21ನೇ ಸಾಲಿಗೂ ಸಹ ವಿದ್ಯಾಭ್ಯಾಸಕ್ಕೆ ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಈ ವಿದ್ಯಾರ್ಥಿವೇತನ ಯೋಜನೆಯನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯವು ಹಮ್ಮಿಕೊಂಡಿದ್ದು, ಇದರ ಅನುಷ್ಠಾನಕ್ಕೆ ತಮ್ಮ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಮುಖ್ಯವಾಗಿ ಪ್ರಾಂಶುಪಾಲರು ಈ ಹಿಂದಿನಂತೆ ಮುಖ್ಯ ಪಾತ್ರವಹಿಸಬೇಕಾಗಿರುತ್ತದೆ.ಈ ಕಾರ್ಯಕ್ರಮವನ್ನು ನಿಗದಿತ ಸಮಯದೊಳಗೆ ಕಾರ್ಯಗತ ಮಾಡಬೇಕಾಗಿದೆ.

2020-21ನೇ ಸಾಲಿನ ಅಲ್ಪಸಂಖ್ಯಾತರ ಮೆರಿಟ್-ನಂತರ ಮತ್ತು ಮೆರಿಟ್-ಕಮ್-ಮೀನ್ಸ್ ಯೋಜನೆಯ ಮಾನದಂಡಗಳು ಈ ಕೆಳಕಂಡಂತಿವೆ:-

1. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಕರ್ನಾಟಕ ರಾಜ್ಯದವರಾಗಿದ್ದು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು.

ಮು.ತಿ.ನೋ

2. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ :-

- ಮೆಟ್ರಿಕ್-ನಂತರ ವಿದ್ಯಾರ್ಥಿವೇತನ ಯೋಜನೆಗೆ ಮಿತಿ ರೂ. 2.00 ಲಕ್ಷಕ್ಕೆ ಮೀರಿರಬಾರದು.
- ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನ ಯೋಜನೆಗೆ ಮಿತಿ ರೂ. 2.50 ಲಕ್ಷಕ್ಕೆ ಮೀರಿರಬಾರದು.

3. ವಿದ್ಯಾರ್ಥಿಯು ಹಿಂದಿನ ಕೋರ್ಸಿನ ಅಂತಿಮ ಪರೀಕ್ಷೆಯಲ್ಲಿ ಶೇ.50 ರಷ್ಟು/ತತ್ಸಮಾನ ಶ್ರೇಣಿ ಅಥವ ಅದಕ್ಕಿಂತ ಹೆಚ್ಚಿನ ಅಂಕ ಗಳಿಸಿರಬೇಕು.

ಆದರೆ, 2019-20ನೇ ಸಾಲಿನ ಪದವಿ/ಸ್ನಾತಕೋತ್ತರ ವಿದ್ಯಾರ್ಥಿಗಳನ್ನು (ಎಲ್ಲಾ ವರ್ಷಗಳ) ಕೋವಿಡ್-19 ಲಾಕ್‌ಡೌನ್ ಮಾರ್ಗಸೂಚಿ ಕಾರಣದಿಂದ ಉತ್ತೀರ್ಣಗೊಳಿಸಿದ ಪ್ರಕ್ರಿಯೆಯ ಬಗ್ಗೆ ಮಾಹಿತಿಯ ಅವಶ್ಯಕತೆಯಿದ್ದು, ಮೇಲಿನ ಯೋಜನೆಯ (3)ನೇ ಮಾನದಂಡವನ್ನು ವಿಧಿಸಲು ತಾವುಗಳು ಈ ಕೆಳಕಂಡ ಅಂಶಗಳ ಮಾಹಿತಿ ನೀಡಲು ಕೋರಲಾಗಿದೆ.

1. ಪದವಿ/ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ (ಎಲ್ಲಾ ವರ್ಷಗಳ) ಮುಂದಿನ ಕೋರ್ಸಿಗೆ ಪ್ರವೇಶ ನೀಡಲಾಗಿದೆಯೇ?
2. ವಿದ್ಯಾರ್ಥಿಗಳಿಗೆ ಮುಂದಿನ ಕೋರ್ಸಿಗೆ ಪ್ರವೇಶ ನೀಡಿದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ನಡೆಸಲಾಗಿದೆಯೇ ಅಥವ ಇಲ್ಲವೇ?
3. ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ನಡೆಸದೆ ಮುಂದಿನ ಕೋರ್ಸಿಗೆ ಪ್ರವೇಶ ನೀಡಿದ್ದಲ್ಲಿ ,ಅಂತಹ ವಿದ್ಯಾರ್ಥಿಗಳಿಗೆ ಅಂಕ/ಶ್ರೇಣಿಯನ್ನು ನೀಡಲಾಗಿದೆಯೆ ಅಥವ ಇಲ್ಲವೇ?

ಮೇಲಿನ ಅಂಶಗಳಂತೆ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿದ ರೀತಿಯ ಸಂಪೂರ್ಣ ಮಾಹಿತಿಯನ್ನು ನಮ್ಮೊಂದಿಗೆ ಹಂಚಿಕೊಂಡಲ್ಲಿ, ವಿದ್ಯಾರ್ಥಿವೇತನದ ಮಾರ್ಗಸೂಚಿ ಪ್ರಕಟಿಸಲು ಮತ್ತು ವಿದ್ಯಾರ್ಥಿವೇತನ ನೀಡಲು ಸಹಕಾರಿಯಾಗುತ್ತದೆ ಎಂದು ತಮ್ಮಲ್ಲಿ ವಿನಂತಿಸುತ್ತಿದ್ದೇವೆ.

ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು

**The Chairman CCC kindly arrange to upload in the Institute Website for the information of the respective students**

Assistant Registrar (Academic)
National Institute of Technology
Karnataka, Surathkal
P.O.Srinivasnagar, Mangalore-575 025